ಮಾತ್ರ ಪ್ರಗತಿಯಲ್ಲಿವೆ. ಇಲ್ಲಿ ಈ ಒಂದು ಯೋಜನೆಗೆ 651 ಲಕ್ಷ ರೂ.ಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿ ಯೋಜನೆಯು ಕೂಡ ಸಿದ್ಧವಾಗಿದೆ. ಅದರಲ್ಲಿ ಮೂರನೆಯ ಒಂದು ಭಾಗ ಅಂದರೆ 45 ಲಕ್ಷ ರೂ.ಗಳನ್ನು ಚಾಮರಾಜನಗರ ಪುರಸಭೆಯವರು ಕಟ್ಟಬೇಕಾದಂಥ ಹಣವಾಗಿದೆ. ಅವರು ಆ ಹಣವನ್ನು ತುಂಬಿಲ್ಲ. ಆದುದರಿಂದ ಅದು ಮುಂದು ಮುಂದಕ್ಕೆ ಹೋಗುತ್ತಾ ಇದೆ. ಯಾವುದೋ ಬೇರೆ ರೂಪದಲ್ಲಿ ಅದಕ್ಕೆ ಬೇಕಾಗುವ ಹಣವನ್ನು ತೊಡಗಿಸಿ ಅದನ್ನು ಕಾರ್ಯಗತಗೊಳಿಸುವ ಕಾರ್ಯವನ್ನು ಮಾಡುತ್ತೇವೆ.

ಶ್ರೀ ಜಗದೀಶ್ ಪಾಟೀಲ್:- ಮಾನ್ಯ ಅಧ್ಯಕ್ಷರೇ, ನಮಗೆ ಸ್ವಾತಂತ್ರ್ಯ ಸಿಕ್ಕು 50 ವರ್ಷಗಳಾದರೂ ಕೂಡ ನಮ್ಮ ಬೀಳಗಿ ಪ್ರದೇಶಕ್ಕೆ ಇನ್ನೂ ಯಾವುದೇ ಒಳಚರಂಡಿ ಯೋಜನೆಗಳಿಲ್ಲ, ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲ, ಆದುದರಿಂದ ದಯಮಾಡಿ 1996-97ನೇ ಸಾಲಿನಲ್ಲಿ ಕುಡಿಯುವ ನೀರಿನ ಮತ್ತು ಒಳಚರಂಡಿ ವ್ಯವಸ್ಥೆ ಮಾಡಲು ಸೂಕ್ತ ಆದೇಶವನ್ನು ಹೊರಡಿಸುವಿರೋ?

ಅಧ್ಯಕ್ಷರು:- ಪಾಟೀಲ್‌ರವರು ನಿಮ್ಮ ಬೀಳಗಿ ಕ್ಷೇತ್ರದ ಈ ವಿಚಾರವನ್ನು ಪ್ರತ್ಯೇಕವಾಗಿ ಕೇಳಿ.

ಶ್ರೀ ಡಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೇ, ಸಿಟಿ ಮುನ್ಸಿಪಲ್ ಕೌನ್ಸಿಲ್ ಮತ್ತು ಟೌನ್ ಮುನ್ಸಿಪಲ್ ಕೌನ್ಸಿಲ್‌ಗೆ ಒಳಚರಂಡಿ ಯೋಜನೆಯನ್ನು ಅಳವಡಿಸಿಕೊಳ್ಳಲಿಕ್ಕೆ ಅವರ ಪಾಲಿನ ವಂತಿಗೆ ಮೂರನೆಯ ಒಂದಶದಿಂದ 10 ಪರ್‌ಸೆಂಟ್‌ಗೆ ಇಳಿಸುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದೆರು. ಅದರ ಬಗ್ಗೆ ಸರಕಾರದವರು ಏನಾದರೂ ನಿರ್ಧಾರವನ್ನು ಮಾಡಿದ್ದಾರೆಯೇ?

ಶ್ರೀ ಬಿ.ಎನ್.ಬಚ್ಚೇಗೌಡ:- ನೀರಿನ ವಿಚಾರದಲ್ಲಿ ಹಾಗೆ ಪ್ರಸ್ತಾಪ ಮಾಡಿದಂತಾದ್ದು. ಒಳಚರಂಡಿ ವ್ಯವಸ್ಥೆಯಲ್ಲಿ ಆ ಪ್ರಸ್ತಾಪವನ್ನು ನಾನು ಮಾಡಿಲ್ಲ. ನಾನು ಹೇಳಿದ್ದುದು ನೀರು ಕೊಡುವಂಥ ಯೋಜನೆಯಲ್ಲಿ 10 ಪರ್‌ಸೆಂಟ್‌ನಷ್ಟು ವಂತಿಗೆಯನ್ನು 50 ಸಾವಿರಕ್ಕೆ ಮೇಲ್ಪಟ್ಟು ಇರುವ ಪುರಸಭೆಗಳಿಗೆ, ಇನ್ನೂ ನಮ್ಮ ಸಚಿವಸಂಪುಟದಲ್ಲಿ ಅದನ್ನು ಒಂದು ಲಕ್ಷಕ್ಕೆ ಏರಿಸಬೇಕು. ಅದರೊಳಗೆ ಇರುವವುಗಳಿಗೆ ಉಚಿತವಾಗಿ ಕೊಡಬೇಕೆಂಬ ದೃಷ್ಟಿಯೂ ಇದೆ. ಅನೇಕ ಪಟ್ಟಣಗಳಲ್ಲಿನ ಪುರಸಭೆಗಳಿಗೆ ಈ ಹಣವನ್ನು ಕೊಡುವ ಶಕ್ತಿ ಇಲ್ಲ ಎಂಬ ವಿಚಾರವು ನಮಗೆ ಗೊತ್ತಿದೆ. ಅವರು ತಮ್ಮ ಪಾಲಿನ ವಂತಿಗೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ನಿಗದಿತ ಜನಸಂಖ್ಯೆಯನ್ನು 50 ಸಾವಿರದಿಂದ ಒಂದು ಲಕ್ಷಕ್ಕೆ ಹೆಚ್ಚಿಸುವುದರ ಬಗ್ಗೆ ಸಚಿವಸಂಪುಟದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಳ್ಳಲಿದ್ದಾರೆ.

ವಿಷಯ:- ಸಕಲೇಶಪುರದ ಪೌರ ಕಾರ್ಮಿಕರು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 143 (668)

ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ):- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸಕಲೇಶಪುರ ನಗರಸಭೆಯಲ್ಲಿ ಇರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು?

2. ಸಕಲೇಶಪುರ ನಗರಸಭೆಯಲ್ಲಿ ಕಸಗುಡಿಸುವವರು (ಸ್ವೀಪರ್ಸ್)ಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ, ಈ ಕೊರತೆ ನೀಗಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎಸ್.ಪಟೇಲ್ (ಪೌರಾಡಳಿತ ಸಚಿವರು):-

1. 30.

2. ಹೌದು.

3. ಕಸವನ್ನು ಸುಸೂತ್ರವಾಗಿ ಕಡಿಮೆ ವೆಚ್ಚದಲ್ಲಿ ತೆಗೆಸುವ ಸಲುವಾಗಿ ಕಸವನ್ನು ತೆಗೆಯುವ ಈ ಕೆಲಸವನ್ನು ಖಾಸಗಿ ವ್ಯಕ್ತಿಗಳಿಗೆ ವಹಿಸಲಾಗುತ್ತದೆ.

ಶ್ರೀ ಬಿ.ಬಿ.ಶಿವಪ್ಪ:- ಅಧ್ಯಕ್ಷರೇ ಸಕಲೇಶಪುರ ಪುರಸಭೆ ಕಸಗುಡಿಸುವವರ ಕೊರತೆ ಇದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಹೌದು, ಎಂದು ಹೇಳಿದ್ದಾರೆ. ಕಸವನ್ನು ಸುಸೂತ್ರವಾಗಿ ಕಡಿಮೆ ವೆಚ್ಚದಲ್ಲಿ ತೆಗೆಸುವ ಸಲುವಾಗಿ ಈ ಕೆಲಸವನ್ನು ಖಾಸಗಿ ವ್ಯಕ್ತಿಗಳಿಗೆ ವಹಿಸಲಾಗಿದೆ ಎಂಬ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಸಕಲೇಶಪುರದ ಪುರಸಭೆ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಇತ್ತೀಚಿನ ತಮ್ಮ ಸರಕಾರದ ನೀತಿಗನುಸಾರವಾಗಿ ಹೊಸದಾಗಿ ಚುನಾಯಿಸಿ ಬಂದ ಆ ಸಭೆಯಲ್ಲಿ ಮಹಿಳೆಯರು ಜಾಸ್ತಿ ಬಂದಿದ್ದಾರೆ. ಎಲ್ಲರೂ ಸ್ವತಂತ್ರವಾಗಿ ಆರಿಸಿ ಬಂದಿರತಕ್ಕಂಥ ಆ ಜಾಗದಲ್ಲಿ ತಮ್ಮ ತತ್ವಕ್ಕನುಸಾರವಾಗಿ ನಾಮಿನೇಶನ್ ಮಾಡಿದ್ದೀರಿ. ನಾಮಿನೇಶನ್ ಮಾಡತಕ್ಕಂಥ ಸಂದರ್ಭದಲ್ಲಿ ಅವರ ಚರಿತ್ರೆಗಳನ್ನು ತಾವು ನೋಡಲಿಲ್ಲ. ಅದರಿಂದಾಗಿ ಮುನ್ಸಿಪಾಲಿಟಿಯ ಕೆಲಸ ಅದು ಮುನ್ಸಿಪಾಲಿಟಿಯಾಗಿಯೇ ಉಳಿದುಹೋಗಿಬಿಟ್ಟಿದೆ. ಸುಸೂತ್ರವಾಗಿ ಕೆಲಸ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾದರೆ ತತ್‌ಕ್ಷಣ ಅಲ್ಲಿರತಕ್ಕಂಥ ಅಧಿಕಾರಿಗಳನ್ನು ಬದಲಾಯಿಸಬೇಕಾಗುತ್ತದೆ. ಹೀಗೆ ಅಧಿಕಾರಿಗಳನ್ನು ಬದಲಾಯಿಸಿಲ್ಲವಾದರೆ ಇಲ್ಲಿ ಏನು ಉತ್ತರವನ್ನು ತಾವು ಒದಗಿಸಿದ್ದೀರಿ, ಅದು ಸತ್ಯಕ್ಕೆ ಬಹುದೂರವಾಗಿರತಕ್ಕಂಥ ಉತ್ತರವಾಗಿದೆ. ಸಕಲೇಶಪುರ ಸಂಪೂರ್ಣವಾಗಿ ಕೊಳೆತು ನಾರತಕ್ಕಂಥ ವ್ಯವಸ್ಥೆಯಾಗಿದೆ. ಮಾನ್ಯ ಸಚಿವರು ಈ ಬಗ್ಗೆ ಗಮನಕೊಡಬೇಕು. ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಮೊನ್ನೆ ಪುರಸಭಾಧ್ಯಕ್ಷಿಣಿಯವರು ಬಂದು ಮಾಹಿತಿಗಳನ್ನು ಕೊಟ್ಟಿದ್ದಾರೆ. ಇದು ಮಹಿಳೆಯರೇ ನಡೆಸತಕ್ಕಂಥ ಪುರಸಭೆ ಇದಾಗಿದ್ದು ಅದಕ್ಕೆ ಸರಕಾರವು ಹೆಚ್ಚಿನ ಒತ್ತಾಸೆಯನ್ನು ಕೊಟ್ಟು ಅವರು ಕಾರ್ಯಕ್ರಮಗಳನ್ನು

ಸರಿಯಾಗಿ, ಸುಗಮವಾಗಿ, ಸುಲಲಿತವಾಗಿ ನಡೆಸಿಕೊಂಡು ಹೋಗಲು ಉತ್ಸಾಹದಿಂದ ಕೆಲಸ ಮಾಡುತ್ತಿರುವ ಅವರಿಗೆ ಸರಕಾರದವರು, ಮಾನ್ಯ ಸಚಿವರು ತಮ್ಮ ಸಂಪೂರ್ಣ ಬೆಂಬೆಲವನ್ನು ಕೊಡಬೇಕೆಂದು ಸನ್ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಮಿರಾಜುದ್ದೀನ್ ಎಸ್.ಪಟೇಲ್:- ಸನ್ಮಾನ್ಯ ಅಧ್ಯಕ್ಷರೇ, ಈಗ ಅಲ್ಲಿ ಪೌರಕಾರ್ಮಿಕರ ಹುದ್ದೆಗಳು ಖಾಲಿ ಇವೆ. ಏಕೆ ಹಾಗೆ ಖಾಲಿ ಉಳಿದಿದೆ ಅಂದರೆ ಸರಕಾರದವರು ನೇಮಕಾತಿಯನ್ನು ಬ್ಯಾನ್ ಮಾಡಿರುತ್ತಾರೆ. ಅದಕ್ಕೆ ಕಾರಣ ಏನೆಂದರೆ ಎಷ್ಟೋ ಮುನ್ಸಿಪಾಲಿಟಿಗಳಲ್ಲಿ ತಮ್ಮ ಸಿಬ್ಬಂದಿಗಳಿಗೆ ಸಂಬಳ ಕೊಡುವ ಸಾಮರ್ಥ್ಯ ಇಲ್ಲವಾಗಿದೆ. ಹಾಗಾಗಿ ಈಗ ನಾವು ಹೊಸ ರಿಕ್ರೂಟ್‌ಮೆಂಟ್‌ನ್ನು ಮಾಡಿದರೆ ಇನ್ನೂ ಹೆಚ್ಚಿನ ಭಾರವು ಬೀಳುತ್ತದೆ. ಆದುದರಿಂದ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಮಾಡಿದರೆ ಅದು ಚೀಪ್ ಆಗುತ್ತದೆ ಎಂದು ಹೇಳಿ ಆ ಉದ್ದೇಶದಿಂದ ಸರಕಾರದಿಂದ ಒಂದು ಸೂಚನೆಯನ್ನು ಈ ಕುರಿತು ಜಾರಿ ಮಾಡಿದ್ದೇವೆ. ಮಾನ್ಯ ಸದಸ್ಯರು ಅಲ್ಲಿನ ಪುರಸಭೆಯ ಅಧಿಕಾರಿಗಳು ಸರಿಯಾಗಿ ಜವಾಬ್ದಾರಿಯಿಂದ ಕೆಲಸ ಮಾಡುತ್ತಾ ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ನಾನು ಆಡಳಿತವನ್ನು ಆದಷ್ಟು ಮಟ್ಟಿಗೆ ಸರಿಪಡಿಸಬೇಕು ಎಂಬ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ. ಸರಕಾರದ ಯಾವ ಯಾವ ಸ್ಕೀಮ್ ಇದೆ ಅದನ್ನು ಪೂರ್ಣಪ್ರಮಾಣದಲ್ಲಿ ಇಂಪ್ಲಿಮೆಂಟ್ ಮಾಡಬೇಕು, ಅಲ್ಲಿರತಕ್ಕಂಥ ಜನರಿಗೆ, ವೀಕರ್‌ಸೆಕ್ಷನ್‌ಗಳಿಗೆ ಸರಕಾರದ ಯಾವ ಯಾವ ಸೌಲಭ್ಯಗಳು ಸಿಗಬೇಕಾಗಿದೆ ಅದನ್ನು ದೊರಕಿಸಿಕೊಡಲು ನಾವು ಚರ್ಚೆ ಮಾಡಿದ್ದೇವೆ. ಪುರಸಭೆ ವ್ಯಾಪ್ತಿಯ ಡೆವಲಪ್‌ಮೆಂಟ್ ಸಲುವಾಗಿ ಎಷ್ಟೋ ಪುರಸಭೆಗಳ ಡಿಮ್ಯಾಂಡ್ ಏನಿದೆ, ಅವರ ಡಿಮ್ಯಾಂಡ್‌ಗೂ ಅವರು ಕೊಡುತ್ತಿರುವ ಸಂಬಳಕ್ಕೂ ಇರುವ ವ್ಯತ್ಯಾಸವನ್ನು ನಾವು ನೋಡಿದರೆ ಬೇಸರವಾಗುತ್ತದೆ. ನಮ್ಮ ಗುಲಬರ್ಗದಲ್ಲಿನ ಕಾರ್ಪೊರೇಷನನ್ನು ಉದಾಹರಿಸಿದರೆ, ಅವರ ಡಿಮ್ಯಾಂಡ್ 2.5 ಕೋಟಿಗಳು ಇದ್ದರೆ ಅಲ್ಲಿನ ಸಂಬಳದ ವೆಚ್ಚ 2.2 ಕೋಟಿ ರೂ.ಗಳು ಇವೆ. ಅಲ್ಲಿ ಪ್ರತಿ ನಾಲ್ಕು ವರ್ಷಗಳಿಗೂ ಟ್ಯಾಕ್ಸನ್ನು ರಿವೈಸ್ ಮಾಡುತ್ತಾ ಇದ್ದಾರೆ. ಆದರೆ ಬರುವ ಅಧಿಕ ಆದಾಯವು ಕೂಡ ಸಿಬ್ಬಂದಿಯ ಇನ್‌ಕ್ರೀಮೆಂಟ್, ಇತರ ಭತ್ಯೆಗಳಿಗೆ ಸರಿಹೋಗುತ್ತದೆ. ಈ ವಿಚಾರವನ್ನು ಸರಿಪಡಿಸುವಲ್ಲಿ ಅಲ್ಲಿನ ನಾಗರೀಕರ, ಕೌನ್ಸಿಲರ್‌ಗಳ ಜವಾಬ್ದಾರಿಯು ಇದೆ. ನಾಗರೀಕರು ಕೂಡ ತಮ್ಮ ತೆರಿಗೆ ಇತ್ಯಾದಿಗಳನ್ನು ಬಾಕಿ ಇರಿಸಿಕೊಳ್ಳದೇ ಸಕಾಲದಲ್ಲಿ ಕೊಡುತ್ತಿರಬೇಕು. ಆಗ ಸರಕಾರದವರು ಕೂಡ ತಮ್ಮ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಾಗ ಅಂಥ ಪ್ರದೇಶಗಳು ಇಂಪ್ರೂವ್ ಆಗುತ್ತವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಸಕಲೇಶಪುರದ ಪುರಸಭೆಯ ಸಮಸ್ಯೆಗಳನ್ನು ತಿಳಿದುಕೊಂಡು ಅದನ್ನು ಸರಿಪಡಿಸುತ್ತೇನೆಂಬ ಆಶ್ವಾಸನೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ನೀಡಬಯಸುತ್ತೇನೆ.

ಶ್ರೀ ಬಿ.ಬಿ.ಶಿವಪ್ಪ:- ದಯಮಾಡಿ ಅಲ್ಲಿನ ಪುರಸಭೆಯ ಚುನಾಯಿತ ಪ್ರತಿನಿಧಿಗಳನ್ನು

ಕರೆಯಿಸಿ ಅವರು ಅಲ್ಲಿ ಎದುರಿಸತಕ್ಕಂಥ ಸಂಕಟಗಳನ್ನು ಅರಿತುಕೊಂಡು ಅವುಗಳನ್ನು ಬಗೆಹರಿಸುವಲ್ಲಿ ತತ್‌ಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಅರಿಕೆ.

ಅಧ್ಯಕ್ಷರು:- ಅವರನ್ನು ಇಲ್ಲಿಗೆ ಕರೆಸುವುದು ಬೇಡ. ಅಧಿವೇಶನ ಮುಗಿದ ಮೇಲೆ ಸಚಿವರು ಸಕಲೇಶಪುರಕ್ಕೆ ಬರುವ ಹಾಗೆ ಮಾಡೋಣ.

ಶ್ರೀ ಮಿರಾಜುದ್ದೀನ್ ಎನ್.ಪಟೇಲ್:- ಮಾನ್ಯ ಅಧ್ಯಕ್ಷರೇ, ಸಕಲೇಶಪುರಕ್ಕೆ ಹೋಗಿ ಖುದ್ದಾಗಿ ಸಮಸ್ಯೆಗಳನ್ನು ನೋಡಿ ಬಗೆಹರಿಸುತ್ತೇನೆ. ಅಂತೆಯೇ ಮಾನ್ಯ ಸದಸ್ಯರನ್ನು ಅಲ್ಲಿ ಭೇಟಿ ಮಾಡಿ ಅವರೊಂದಿಗೆ ಡಿಸ್‌ಕಸ್ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ:- ಹೊಸಪೇಟೆ ನಗರದ ಕುಡಿಯುವ ನೀರು ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 144 (1060)

ಶ್ರೀ ಜಿ.ಶಂಕರಗೌಡ (ಹೊಸಪೇಟೆ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಪೇಟೆ ನಗರವು ಎರಡುವರೆ ಲಕ್ಷ ಜನ ಸಂಖ್ಯೆ ಮೀರಿದ್ದು ಈಗಿರುವ ನೀರಿನ ವ್ಯವಸ್ಥೆ ಸಾಲದಾಗಿದ್ದು ಕುಡಿಯುವ ನೀರಿನ ಅವ್ಯವಸ್ಥೆಯಿಂದ ತೊಂದರೆಗೀಡಾಗಿರುವುದು ಸರ್ಕಾರದವರ ಗಮಕ್ಕೆ ಬಂದಿದೆಯೇ?

ಆ) ಎರಡನೇ ಹಂತದ ಯೋಜನೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಸದರಿ ಯೋಜನೆಯಲ್ಲಿ ತೊಡಗಿಸಿದ ಹಣವೆಷ್ಟು?

ಈ) ಎಷ್ಟು ಕಾಲಾವಕಾಶದಲ್ಲಿ ಸದರಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಬಂದಿದೆ.

ಆ) ಹೊಸಪೇಟೆ ಪಟ್ಟಣದ ಸಮಗ್ರ ನೀರು ಸರಬರಾಜು ಯೋಜನೆ ರೂ.250 ಲಕ್ಷಗಳಿಗೆ ಸರ್ಕಾರವು ಆದೇಶ ಸಂಖ್ಯೆ:ವನಇ 24 ಯುಎಂಎಸ್ 85, ದಿ:27-4-1988ರಲ್ಲಿ ಮಂಜೂರಾತಿ ಕೊಟ್ಟಿದೆ. ಈ ಯೋಜನೆಯು ಈಗ ಪ್ರಗತಿಯಲ್ಲಿದೆ.

ಇ) ಈ ಯೋಜನೆಗೆ ಕೆಳಕಂಡಂತೆ ಹಣಕಾಸು ಸಂಸ್ಥೆಗಳಿಂದ ತೊಡಗಿಸಲು ವ್ಯವಸ್ಥೆ ಮಾಡಲಾಗಿದೆ.